ಡಿಡಬ್ಲೂ -1

**ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

**ದಿಃ 04-06-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ ಆರ್ ಎನ್   ವಕೀಲರಿಂದ.**

ನಾನು 1 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ತಂದೆ ಈರಪ್ಪ 1973 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡ ಸಂದರ್ಭದಲ್ಲಿ ನನಗೆ 10 ರಿಂದ 12 ವರ್ಷ ವಯಸ್ಸು ಇತ್ತು. ನನಗೆ ಈಗ 60 ವರ್ಷ ವಯಸ್ಸು ಇರುತ್ತದೆ. ನನಗೆ ಎರಡು ಗಂಡು ಮತ್ತು ಒಂದು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ 1 ನೇ ಮಗ 20 ವರ್ಷ ವಯಸ್ಸಿನವನು ಇರುತ್ತಾನೆ. ನಾನು ಬಡಿಗಿ ಕೆಲಸ ಮಾಡುತ್ತೇನೆ. ನಾನು ಈಗ ಅಥಣಿ ತಾಲ್ಲೂಕು ಐನಾಪುರ ಗ್ರಾಮದಲ್ಲಿ ವಾಸವಿರುತ್ತೇನೆ. ಈಗ 30 ವರ್ಷಗಳಿಂದ ಐನಾಪುರದಲ್ಲಿ ವಾಸ ಇರುತ್ತೇನೆ. ನನ್ನ ತಂದೆ ಬೆಳಗಾವಿಯ ಅಳತಗಾ ಗ್ರಾಮದಲ್ಲಿ ವಾಸವಿದ್ದರು. ನನಗೆ ವ್ಯವಹಾರ ಜ್ಞಾನ ಇರುತ್ತದೆ ಎಂದರೆ ಸರಿ. ನನಗೆ ನ್ಯಾಯಾಲಯದಿಂದ ನೋಟಿಸ್ ಬಂದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇರದೆ ಇದ್ದರೂ ಸಹ ನಾನೇ ಅರ್ಜಿಯನ್ನು ದಾಖಲಿಸಿಕೊಂಡು ದಾವೆಯಲ್ಲಿ ಸೇರ್ಪಡೆಗೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಇಂಗ್ಲೀಷ್ ನಲ್ಲಿ ಇರುವುದರಿಂದ ಅದು ನನಗೆ ಅರ್ಥವಾಗುವುದಿಲ್ಲ ಎಂದರೆ ಸರಿ, ಸಾಕ್ಷಿಯು ಅದರಲ್ಲಿ ಬರೆದಿರುವುದು ನಿಜ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಸಂಗತಿಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನೇ ದಾಖಲಿಸಿರುತ್ತೇನೆ. ನಾನು ಈ ದಾವೆಯನ್ನು ನನ್ನ ಅಣ್ಣ ಬೀಮರಾವ್ ಈರಪ್ಪ ಸುತಾರ್ ಇವರ ವಿರುದ್ಧ ದಾಖಲಿಸಿರುತ್ತೇನೆ. ನನ್ನ ಅಣ್ಣನನ್ನು ಹೊರತುಪಡಿಸಿ ಬೇರೆಯವರ ವಿರುದ್ಧ ನನ್ನ ಕೇಸು ಇಲ್ಲ ಎಂದರೆ ಸರಿ. ಆಸ್ತಿ ಪಾಲಿನ ಸಲುವಾಗಿ ಈ ದಾವೆ ದಾಖಲಿಸಿರುತ್ತೇನೆ

ಎಂದರೆ ಸರಿ. ನನಗೆ ದಾವಾ ಸ್ವತ್ತುಗಳ ಸರ್ವೆ ನಂಬರ್ ಗಳನ್ನು ಹಾಗೂ ಕ್ಷೇತ್ರವನ್ನು ಹೇಳಲು ಬರುವುದಿಲ್ಲ. ಸುಮಾರು 10-11 ಆಸ್ತಿಗಳು ಇರುತ್ತವೆ. ಎಲ್ಲಾ ಆಸ್ತಿಗಳನ್ನು ಸೇರಿಸಿ ಸುಮಾರು 4 ಎಕರೆ ಆಗುತ್ತದೆ. ದಾವಾ ಸ್ವತ್ತುಗಳು ಜಮೀನುಗಳು ಮಾತ್ರ ಇರುತ್ತವೆ. ನನ್ನ ತಂದೆ ತೀರಿಕೊಂಡ ನಂತರ ವಾರಸಾ ಆಗಿರುತ್ತದೆ. ದಾವಾ ಸ್ವತ್ತುಗಳ ದಾಖಲೆಗಳಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿ ಅಲ್ಲ. ಇತ್ತೀಚಿನ ದಾಖಲೆಗಳಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಹೆಸರನ್ನು ತೆಗೆಯಿಸಿರಬಹುದು ಎಂದು ನುಡಿಯುತ್ತಾರೆ. ಈಗ ಸುಮಾರು 20 ವರ್ಷಗಳಿಂದ ನನ್ನ ಹೆಸರನ್ನು ತೆಗೆಯಿಸಿರುತ್ತಾರೆ. ನನ್ನ ಸಹೋದರರ ಹೆಸರುಗಳನ್ನೂ ಸಹ ತೆಗೆಯಿಸಿರುತ್ತಾರೆ. ನನ್ನ ಇನ್ನಿಬ್ಬರು ಸಹೋದರರ ಹೆಸರುಗಳೆಂದರೆ ಕಲ್ಲಪ್ಪ ಮತ್ತು ರಾಮಚಂದ್ರ ಇರುತ್ತದೆ. ಕಲ್ಲಪ್ಪ ಮತ್ತು ರಾಮಚಂದ್ರ ಇವರ ಹೆಸರುಗಳನ್ನೂ ಸಹ ದಾವಾ ಸ್ವತ್ತುಗಳಿಂದ ತೆಗೆಯಿಸಿರುತ್ತಾರೆ. ನಮ್ಮ ಹೆಸರನ್ನು ಸುಮಾರು 20 ವರ್ಷಗಳ ಹಿಂದೆ ತೆಗೆಯಿಸಿರುವ ಬಗ್ಗೆ ಗೊತ್ತಾಗಿರುತ್ತದೆ. ಸದರಿ ಹೆಸರನ್ನು ತೆಗೆಯಿಸಿದ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಈಗ್ಗೆ 7-8 ವರ್ಷಗಳ ಹಿಂದೆ ಪ್ರಕರಣ ದಾಖಲಿಸಿರುತ್ತೇನೆ. ಸದರಿ ಪ್ರಕರಣದ ನಂಬರ್ ಹೇಳಲು ಬರುವುದಿಲ್ಲ. ಇದೇ ನ್ಯಾಯಾಲಯದಲ್ಲಿ ಆ ಪ್ರಕರಣ ದಾಖಲಾಗಿರುತ್ತದೆ. ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ಮತ್ತು ನನ್ನ ಸಹೋದರರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ. ನಾನು ಈಗ ನಿಶಾನೆ ಡಿ-1 ನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ನಾನುಈಗ ನಿಶಾನೆ ಪಿ-9 ನ್ನು ನೋಡುತ್ತಿದ್ದು ಅದರಲ್ಲಿಯೂ ಸಹ ನನ್ನ ಸಹಿ ಇರುತ್ತದೆ. ದಿನಾಂಕ 30-05-1992 ರಲ್ಲಿ ನನ್ನ ಮತ್ತು ನನ್ನ ಸಹೋದರರ ಮಧ್ಯೆ ವಿಭಾಗ ಆಗಿತ್ತು ಎಂದರೆ ಸರಿಯಲ್ಲ. ದಿನಾಂಕ 02-07-1992 ರಲ್ಲಿ ನನ್ನ ಸಹೋದರನ ಕಡೆಯಿಂದ ಹಣ ಪಡೆದು ಆಸ್ತಿಗಳನ್ನು ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮ್ಯುಟೇಷನ್ ನಂಬರ್ 986 ರ ಪ್ರಕಾರ ನನ್ನ ಸಹೋದರನ ಹೆಸರು ಮಾತ್ರ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಮ್ಯುಟೇಷನ್ ಪ್ರಕಾರ ನನ್ನ ಸಹೋದರನ ಹೆಸರು ದಾಖಲಾಗಿವೆ ಎಂದರೆ ಸರಿಯಲ್ಲ. ನಾನು ನನ್ನ ಪರವಾಗಿ ಮಾತ್ರ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಕಲ್ಲಪ್ಪನ

ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಯಿಸಿದ್ದೇನೆ ಎಂದರೆ ಸರಿ. ನಾನು ಮ್ಯುಟೇಷನ್ ನಂಬರ್ 986 ನೆದ್ದನ್ನು ಚಾಲೆಂಜ್ ಮಾಡಿದ್ದು ಅದು ವಜಾ ಆಗಿರುತ್ತದೆ ಎಂದರೆ ಅದು ನನಗೆ ಗೊತ್ತಿಲ್ಲ. ಸದರಿ ವಜಾ ಆದ ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಅದು ಸಹ ವಜಾ ಆಗಿರುತ್ತದೆ ಎಂದರೆ ಅದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**